ಶ್ರೀ ರಾಮಲಿಂಗ ರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಇಲ್ಲ.

ಹಳದಿ ಪಡಿತರ ಚೀಟಿ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದ್ದು ಇನ್ನೂ ಪೂರ್ಣಗೊಂಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲೆಯ ಮಾಂಜರಾ ನದಿಗೆ ಅಡ್ಡಲಾಗಿ ಹಾಲಹಳ್ಳಿ ಹಾಗೂ ಚಂದಾಪುರ ಗ್ರಾಮಗಳ ಹತ್ತಿರ ಬ್ಯಾರೇಜ್ ನಿರ್ಮಾಣ

702(995) ಶ್ರೀ ಗುಂಡಪ್ಪ ವಕೀಲ್ (ಔರಾದ್): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋದಾವರಿ ಬೆಸಿನ್‌ನಲ್ಲಿ ಬರುವ, ಬೀದರ್ ಜಿಲ್ಲೆಯ ಮಾಂಜರಾ ನದಿಗೆ ಅಡ್ಡಲಾಗಿ ಹಾಲಹಳ್ಳಿ ಹಾಗೂ ಚಂದಾಪುರ ಗ್ರಾಮಗಳ ಹತ್ತಿರ ಬ್ಯಾರೇಜ್ ಕಟ್ಟುವ ವಿಚಾರ ಸರ್ಕಾರಕ್ಕಿದೆಯೇ?

ಆ) ಬಚಾವತ್ ಅವಾರ್ಡ್ ಪ್ರಕಾರ ಈ ನದಿಯಿಂದ ನೀರು ಉಪಯೋಗಿಸಲು ಈ ಬ್ಯಾರೇಜ್‌ಗಳ ಅವಶ್ಯಕತೆ ಇದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಹೌದು. ಮಾಂಜ್ರಾ ನದಿಗೆ ಅಡ್ಡಲಾಗಿ ಹಾಲಹಳ್ಳಿ, ಚಂದಾಪುರ, ಮಾಣಿಕೇಶ್ವರ ಮತ್ತು ಜಿರಗಿಹಾಳ್ ಗ್ರಾಮಗಳ ಹತ್ತಿರ ಬ್ಯಾರೇಜುಗಳನ್ನು ನಿರ್ಮಿಸಲಾಗುವುದು.

ಆ) ಗೋದಾವರಿ ಜಲ ವಿವಾದ ನ್ಯಾಯಾಧೀಕರಣದ ಪ್ರಕಾರ, ಈ ನದಿಯಿಂದ ನೀರನ್ನು ಉಪಯೋಗಿಸಲು ಬ್ಯಾರೇಜುಗಳ ಅವಶ್ಯಕತೆಯಿದೆ.

ನುಸಿ ಪೀಡೆಯಿಂದ ತೆಂಗು ಬೆಳೆಗಾರರಿಗೆ ಆಗಿರುವ ನಷ್ಟದ ಬಗ್ಗೆ

704(1100) ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನುಸಿಪೀಡೆ ಕಾಯಿಲೆಯಿಂದ ತೆಂಗು ಬೆಳೆಗಾರರಿಗೆ ಕೋಟ್ಯಾಂತರ ರೂಪಾಯಿ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೌದಾದರೆ, ಈ ಪೀಡೆ ನಿವಾರಣೆಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಇ) ನಿವಾರಣೆಗೆ ತಾಂತ್ರಿಕ ಬಯಾಲಾಜಿಕಲ್ ಆರ್ಗಾನಿಕ್ ಮತ್ತು ಇನ್ ಆರ್ಗ್ಯಾನಿಕ್ ಹಾಗೂ ಹರ್ಬಲ್ ತಾಂತ್ರಿಕತೆಯನ್ನು ಬಳಸುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿ ಇದಯೇ?

ಈ) ಈ ಪೀಡೆ ನಿವಾರಣೆಗೆ ಹೊರದೇಶದ ತಂತ್ರಜ್ಞಾನವನ್ನು ಆಮದು ಮಾಡಿಕೊಂಡು ಪರಿಶೀಲಿಸುವ ಇಚ್ಚೆ ಸರ್ಕಾರಕ್ಕೆ ಇದೆಯೇ?